ಅಧ್ಯಕ್ಷರು ಮಾನ್ಯ ಸಚಿವರು ಉತ್ತರವನ್ನು ಹೇಳಿ ಈಗಾಗಲೇ 3–4 ಜನರಿಗೆ ಉಪ ಪ್ರಶ್ನೆಯನ್ನು ಕೇಳುವುದಕ್ಕೆ ಅವಕಾಶವನ್ನು ಮಾಡಿ ಕೊಟ್ಟಿದ್ದೇನೆ ಎಲ್ಲರೂ ಕೇಳುವುದಕ್ಕೆ ಅವಕಾಶವಿಲ್ಲದಿರುವುದರಿಂದ ಸಚಿವರು ಉತ್ತರವನ್ನು ಹೇಳಲಿ ಅದು ಅಲ್ಲದೇ ಅರ್ಧಗಂಟೆ ಕಾಲಾವಕಾಶದಲ್ಲಿ ಕೂಡ ಇದಕ್ಕೆ ಅವಕಾಶವಿದೆ ಸೆಸ್ ಕಟ್ಟುತ್ತಿದ್ದಾರಾ? ಕಟ್ಟುತ್ತಿದ್ದರೆ ಅವರು ರಸ್ತೆಗಳಿಗೆ ಹಣವನ್ನು ಏಕೆ ಬಿಡುಗಡೆ ಮಾಡುತ್ತಿಲ್ಲವೆಂದು ಹೇಳಿ, ಸ್ವಾಮಿ

ಶ್ರೀ ಎಸ್ ಎ ರವೀಂದ್ರನಾಥ್ ಮಾನ್ಯ ಅಧ್ಯಕ್ಷರೆ, ಈ ಹಣ ಈ ವರ್ಷ ಕಲೆಕ್ಟ್ ಆದರೆ ಮುಂದಿನ ವರ್ಷದಿಂದ ಅಂದರೆ ಎರಡು ವರ್ಷದಲ್ಲಿ ಆ ಹಣವನ್ನು ಖರ್ಚು ಮಾಡಬೇಕೆಂದು ಈ ಹಿಂದೆ ಸರ್ಕಾರ ಒಂದು ತೀರ್ಮಾನವನ್ನು ತೆಗೆದುಕೊಂಡಿದೆ ಈಗ ಕಲೆಕ್ಟ್ ಆಗಿರುವ 4 ಕೋಟಿ ಏನು ಹಣ ಇದೆ, ಆ ಹಣವನ್ನು ಈಗ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಸಮಿತಿಗೆ ಕೊಡಲಾಗಿದ್ದು ಅದಕ್ಕೆ MLA ಮತ್ತು MLC ಯವರು ಇದರ ಸದಸ್ಯರು ಆಗಿರುತ್ತಾರೆ ಅದು ಅಲ್ಲದೆ ಎಲ್ಲಾ ಸಕ್ಕರೆ ಕಂಪನಿಯವರನ್ನು ಸಮಿತಿ ಸಭೆಗೆ ಕರೆಸುವಂಥದ್ದನ್ನು ಮಾಡುತ್ತೇವೆ ಆದಷ್ಟು ಹಣವನ್ನು ಬೇಗನೇ ಬಿಡುಗಡೆ ಮಾಡಿಸಿ ಈ ರಸ್ತೆಗಳನ್ನು ರಿಪೇರಿ ಮಾಡಿಸುವಂಥ ಕೆಲಸವನ್ನು ಮಾಡಿಸುತ್ತೇವೆ

ಶ್ರೀ ಎಸ್ ಬಾಲರಾಜ್ ಆ ಹಣವನ್ನು ಕೊಟ್ಟುಬಿಟ್ಟಿದ್ದಾರೆಯೇ, ಮತ್ತೆ ಕೊಟ್ಟಿರತಕ್ಕಂಥ ಹಣದಲ್ಲಿ ಬಾಕಿ ಇದೆಯೇ? ಅದಕ್ಕೆ ಸಂಬಂಧಪಟ್ಟವರನ್ನು ಕರೆಸಿ ಉತ್ತರ ಕೊಡಿಸಿ, ಅಧ್ಯಕ್ಷರೆ

ಶ್ರೀ ಎಸ್ ಎ ರವೀಂದ್ರನಾಥ್ (ಗ್ರಾಮೀಣ ನೀರು ಸರಬರಾಜು ಮತ್ತು ನೈರ್ಮಲ್ಯ ಸಚಿವರು) ಈಗ ಕೊಳ್ಳೆಗಾಲದಲ್ಲಿ ಎಷ್ಟು ಕಬ್ಬು ಮೈಸೂರು ಜಿಲ್ಲೆಗೆ ಬಂದಿದೆ ಎಂಬ ಬಗ್ಗೆ ಪರಿಶೀಲಿಸಿ ಚಾಮರಾಜನಗರಕ್ಕೆ ಎಷ್ಟು ಹಣ ಬೇಕೋ ಅಷ್ಟು ಹಣವನ್ನು ಕೊಡಿಸುವುದಕ್ಕೆ ವ್ಯವಸ್ಥೆ ಮಾಡಿಸುತ್ತೇನೆ

ಅಧ್ಯಕ್ಷರು ಈಗ ಎ ಬಿ ಪಾಟೀಲ್ ತಮ್ಮ ಪ್ರಶ್ನೆ ಕೇಳಿ ಏಕೆಂದರೆ ಅವರು ಬೇರೆ ಕಡೆಗೆ ಹೋಗಬೇಕಾಗಿದೆ

125 (727) ಶ್ರೀ ಪಾಟೀಲ್ ಎ ಬಿ (ಸಂಕೇಶ್ವರ್) – ಮಾನ್ಯ ಗ್ರಾಮೀಣ ನೀರು ಪೂರೈಕೆ, ನೈರ್ಮಲ್ಯ ಮತ್ತು ಸಕ್ಕರೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ ?

ಅ) ಸಂಕೇಶ್ವರ ಕ್ಷೇತ್ರದ ವ್ಯಾಪ್ತಿಯಲ್ಲಿ ಯಾವ ಯಾವ ಗ್ರಾಮಗಳಲ್ಲಿ ಕೊಳವೆ ಬಾವಿಗಳನ್ನು ಕೊರೆಯಿಸಲಾಗಿದೆ , (ಗ್ರಾಮವಾರು ಮಾಹಿತಿ ನೀಡುವುದು),

ಆ) ಕುಡಿಯುವ ನೀರಿನ ಅಭಾವವಿರುವ ಗ್ರಾಮಗಳಿಗೆ ವಿವಿಧ ಯೋಜನೆಗಳಡಿಯಲ್ಲಿ ಎಷ್ಟು ಬಾರಿ ನೀರನ್ನು ಪೂರೈಸಲಾಗುತ್ತಿದೆ,

ಇ) ಕೊಳವೆ ಬಾವಿಗೋಸ್ಕರ ಇಲ್ಲಿಯವರೆಗೆ ಖರ್ಚು ಮಾಡಿರುವ ಹಣ ಎಷ್ಟು, ಇದರಲ್ಲಿ ಕಿರು ನೀರಾವರಿ ಯೋಜನೆಗಳ ಅಡಿಯಲ್ಲಿ ನಿರ್ಮಿತಗೊಂಡಿರುವ ಕೊಳವೆ ಬಾವಿಗಳೆಷ್ಟು,

ಶ್ರೀ ಎಸ್ ಎ ರವೀಂದ್ರನಾಥ್ (ಗ್ರಾಮೀಣ ನೀರು ಪೂರೈಕೆ, ನೈರ್ಮಲ್ಯ ಮತ್ತು ಸಕ್ಕರೆ ಸಚಿವರು) –

ಅ) ಪ್ರಸಕ್ತ ಸಾಲಿನಲ್ಲಿ ಸಂಕೇಶ್ವರ ಕ್ಷೇತ್ರದ ವ್ಯಾಪ್ತಿಯಲ್ಲಿ 30 ಕೊಳವೆ ಬಾವಿಗಳನ್ನು ಕೊರೆಯಲಾಗಿದೆ ಗ್ರಾಮವಾರು ಮಾಹಿತಿಯನ್ನು ಅನುಬಂಧ–1ರಲ್ಲಿ ಪ್ರತ್ಯೇಕವಾಗಿ ಲಗತ್ತಿಸಲಾಗಿದೆ

ಆ) ಆಸ್ತಿತ್ವದಲ್ಲಿರುವ ಯೋಜನೆಗಳ ಜಲಮೂಲಗಳಲ್ಲಿ ಲಭ್ಯವಿರುವ ಇಳುವರಿ ಹಾಗೂ ವಿದ್ಯುತ್ ಪೂರೈಕೆಗನುಗುಣವಾಗಿ ಕನಿಷ್ಠ ದಿನಕ್ಕೆ ಒಂದು ಬಾರಿ ನೀರನ್ನು ಪೂರೈಸಲಾಗುತ್ತಿದೆ

ಇ) ಸಂಕೇಶ್ವರ ಕ್ಷೇತ್ರದ ಕೊಳವೆ ಬಾವಿಗೋಸ್ಕರ ಇಲ್ಲಿಯವರೆಗೆ ರೂ 0 97 ಲಕ್ಷ ಬಿಲ್ ಪಾವತಿಸಿದೆ ಕಿರು ನೀರು ಸರಬರಾಜು ಯೋಜನೆಗಳ ಜಲಮೂಲಕ್ಕಾಗಿ 16 ಕೊಳವೆ ಬಾವಿಗಳನ್ನು ಕೊರೆಯಲಾಗಿದೆ

ಅನುಬಂಧ–1

ರಾಜ್ಯ ಮತ್ತು ಕೇಂದ್ರ ವಲಯಗಳಡಿ ಕೊಳವೆ ಬಾವಿಗಳನ್ನು ಕೊರೆಯಿಸಲಾದ ಗ್ರಾಮಗಳ ವಿವರ

1) ಚಿಕ್ಕಲಗುದ್ದ, 2) ಸೋಲ್ಲಾಪುರ, 3) ವಿಡಸೋಸಿ,4) ಅಮ್ಮಣಗಿ, 5) ಯಮಕನಮರ್ಡಿ (ಪೋಲಿಸ್ ಸ್ಟೇಷನ್), 6) ಹೊನ್ನಿಹಳ್ಳಿ (ಹೊಸ ಶಾಲೆಗೆ ಮತ್ತು ಪಾಯಿಕ ಕಾಲೋನಿಗೆ), 7) ಮಜತಿ, 8) ಬೀದ್ರೇವಾಡಿ, 9) ಖನಿಂಗಪುರ - ಲಕ್ಷ್ಮೀ ಗುಡಿ ಹತ್ತಿರ, 10) ಹಡಲಗಾ, 11) ಭೋಳಶಾಪಟ್ಟಿ, 12) ಕೋಟಿ, 13) ದೊಂಡಗಟ್ಟಿ, 14) ಧೈರವಾಡ (ಬಸ್ ಸ್ಟೇಂಡ್ ಹತ್ತಿರ), 15) ವಿಡಸೋಸಿ (ಗೊಲ್ಲರ ಮಡ್ಡಿ), 16) ಅವಂದವಾಡ (ಸಾಂಬ್ರ ಮುನಿ ಆಶ್ರಮ), 17) ಅವಂದವಾಡ (ಶ್ಯಮಮುನಿ ಆಶ್ರಮ ಹತ್ತಿರ), 18) ಅವಂದವಾಡ (ಹನುಮಾನ ಗುಡಿ), 19) ದಾದದಾಪಟ್ಟಿ (ಜವಕೋಳೀ ಓಣಿ), 20) ದಾದದಾಪಟ್ಟಿ (ಫಸ್ಟ್ ಓಣಿ), 21) ವೀಡಸೋಸಿ (ಹರಿಜನಕೇರಿ) 22) ಕಣಗಲಾ (ಹರಿಜನಕೇರಿ)

ಬಾಕ್ಸೈಟ್ಸೋಸ್ ಪಡಿ ಕೊಳವೆ ಬಾವಿಗಳನ್ನು ಕೊರೆಯಿಸಲಾದ ಗ್ರಾಮಗಳ ವಿವರ

1) ಕೆರಿಮಸ್ತಿಹೋಳಿ, 2) ಮಂಗಸುತ್ತಿ (ಹರಿಜನಕೇರಿ), 3) ದಾದದಾಪಟ್ಟಿ (ಲಕ್ಷ್ಮೀಗುಡಿ ಹತ್ತಿರ), 4) ಕುರಣಿ (ಬಿ ಸಿ ಎಂ ಹಾಸ್ಟೆಲ್), 5) ಹಂದಿಗೂಡ, 6) ಧೈರವಾಡ (ಕೊಗಲಾ ರೋಡು), 7) ಧೈರವಾಡ (ಬಾಡ ಮನೆ ಹತ್ತಿರ), 8) ಬುಗಡಿ ಅಲೂರ (ಕೊಗಲಾ ಪಸ್ತೆ)

ಶ್ರೀ ಎ ಬಿ ಪಾಟೀಲ್ ಇಲ್ಲಿ ನನ್ನ ಪ್ರಶ್ನೆ ಏನೆಂದರೆ, ಕೊಳವೆ ಬಾವಿಗಳನ್ನು ತೆಗೆಯುತ್ತಾರೆ ಇವತ್ತಿನವರೆಗೆ ಎಲೆಕ್ಟ್ರಿಸಿಟಿ ಕನೆಕ್ಷನ್ ಕೊಟ್ಟಿಲ್ಲ ಕಾರಣ, ನಮ್ಮ ಊರಿನಲ್ಲಿ ಕೆ ಇ ಬಿ, ಕೆ ಪಿ ಟಿ ಸಿ ಎಲ್ ಅಥವಾ ಹೆಸ್ಕಾಮ್ ಇಲ್ಲ ಸರ್ಕಾರದಿಂದ ಹಣ ಅವರಿಗೆ ಪಾವತಿಯಾಗುತ್ತಿಲ್ಲ ಕುಡಿಯುವ ನೀರಿನ ವ್ಯವಸ್ಥೆಗಾಗಿ ಕೊಳವೆ ಬಾವಿಗಳನ್ನು ಮಿನಿ ವಾಟರ್ ಸ್ಕೀಮ್‌ಗಳಿಗೆ ತೆಗೆದರೂ ಸಹ ಅಲ್ಲಿ ಎಲೆಕ್ಟ್ರಿಸಿಟಿ ಕನೆಕ್ಷನ್ ಕೊಡುತ್ತಿಲ್ಲ ಕಾರಣ ಕೇಳಿದರೆ, ನೀವು ಹಣವನ್ನು ತುಂಬಬೇಕು ಎಂದು ಹೇಳುತ್ತಾರೆ ಪಂಚಾಯಿತಿಗೆ ದುಡ್ಡಿಲ್ಲ, ಜಿಲ್ಲಾ ಪಂಚಾಯಿತಿಗೆ ದುಡ್ಡು ತುಂಬಿದರೆ ಪ್ರಯೋಜನವಿಲ್ಲ ಟಾಸ್ಕ್‌ಫೋರ್ಸನ ಹಣ ಮುಗಿದು ಹೋಗಿದೆ ಎಲ್ಲಿಂದ ತುಂಬಬೇಕು ಸುಮಾರು ದಿವಸಗಳಾಗಿವೆ,ಇವತ್ತು ಕೊಳವೆ ಬಾವಿಗಳನ್ನು ಕೊರೆದಿದ್ದಾರೆ ನೇರವಾಗಿ ನಮ್ಮಲ್ಲಿ ಗ್ರಾಮೀಣ ವಿದ್ಯುತ್ ಸೊಸೈಟಿ ಇದೆ ಯಾವ ರೀತಿಯಾಗಿ ಹೆಸ್ಕಾಮ್‌ಗೆ ಕಳುಹಿಸಿಕೊಡಬೇಕೋ ಆ ರೀತಿ ಕಳುಹಿಸುತ್ತಿಲ್ಲ ಆದ್ದರಿಂದ ದಯವಿಟ್ಟು ಮಂತ್ರಿಗಳು ಸ್ಪಷ್ಟ ಆದೇಶ ನೀಡಿ ಇವತ್ತು ಸರ್ಕಾರದಿಂದ ಜಿಲ್ಲಾ ಪಂಚಾಯಿತಿಯನ್ನು ಆ ವಿದ್ಯುತ್ ಸರಬರಾಜಿನ ಜೋಡಣೆ ಸಲುವಾಗಿ ತಾವು ಸ್ಪಷ್ಟ ನಿರ್ದೇಶನ ಕೊಟ್ಟು ಹಣ ತುಂಬಿರಿ ಇವತ್ತು ಕೊಳವೆಬಾವಿಗಳನ್ನು ಕೊರೆದರೆ ಉಪಯೋಗವಾಗುತ್ತದೆ ಇವತ್ತು ಕುಡಿಯುವ ನೀರಿನ ಸಮಸ್ಯೆ ಇದೆ ನಮ್ಮ ಕ್ಷೇತ್ರ ಬಹಳ ವಿಚಿತ್ರವಾಗಿದೆ ಅರ್ಧ ಬರಗಾಲವಾದರೆ, ಅರ್ಧ ಹೆಚ್ಚು ಮಳೆಯಾಗುವ ಪ್ರದೇಶವಿದೆ ಆ ಮಳೆ ಎಲ್ಲಿ ಆಗಿಲ್ಲ, ಅಲ್ಲಿ ಕುಡಿಯುವ ನೀರಿಗೆ ಸಮಸ್ಯೆಯಾಗಿದೆ ಮುಂದೆ ಕೊಳವೆ ಬಾವಿಗಳನ್ನು ತೆರೆದರೂ ಪರಿಸ್ಥಿತಿ ಸರಿಯಿಲ್ಲ ಆದ್ದರಿಂದ ದಯವಿಟ್ಟು ಸ್ಪಷ್ಟವಾದ ಉತ್ತರವನ್ನು ಕೊಡಬೇಕು

ಶ್ರೀ ಎಸ್ ಎ ರವೀಂದ್ರನಾಥ್ (ಗ್ರಾಮೀಣ ನೀರು ಸರಬರಾಜು ಮತ್ತು ನೈರ್ಮಲ್ಯ ಸಚಿವರು) ಕೇಂದ್ರ ಮತ್ತು ರಾಜ್ಯ ಯೋಜನೆಗಳಿಂದ ಜಿಲ್ಲಾ ಪಂಚಾಯಿತಿಗಳಿಗೆ ಸಾಕಷ್ಟು ಹಣವನ್ನು ಕೊಟ್ಟಿದೆ ಅದರ ಜೊತೆಗೆ ನಾವು ಟಾಸ್ಕ್ ಫೋರ್ಸ್‌ಗೂ ಸಹ ಸದನ ಆರಂಭವಾಗುವ ಮುಂದೆ 8 18 ಲಕ್ಷ ರೂ ಗಳನ್ನು ಪ್ರತಿ ಕ್ಷೇತ್ರಕ್ಕೆ ಹಣವನ್ನು ಹಂಚಿಕೆ ಮಾಡಿದ್ದೇವೆ ಅದರಲ್ಲಿಯೂ ಸಹ ಹಣವನ್ನು ಉಪಯೋಗಿಸಬಹುದು ಅದರ ಜೊತೆಗೆ ಆ ಮೊದಲು ಕೊರೆದಂಥ ಕೊಳವೆಬಾವಿಗಳಿಗೆ NMP ಮತ್ತು ರಾಜ್ಯ ಮತ್ತು ಕೇಂದ್ರ ಸರ್ಕಾರದ

ವತಿಯಿಂದ ಹೊಂದಾಣಿಕೆ ಮಾಡಲಿಕ್ಕೂ ಸಹ ನಾವು ಸರ್ಕಾರದಿಂದ ಸುತ್ತೋಲೆಯನ್ನು ಕಳುಹಿಸಿಕೊಟ್ಟಿದ್ದೇವೆ

ಅಧ್ಯಕ್ಷರು ಈಗ ಸುರೇಶ್ ಮಾರಿಹಾಳ್, ಇಲ್ಲವೇ, ಸಿ ಎಸ್ ನಾಡಗೌಡರು ಒಂದು ನಿಮಿಷ, ನಾಡಗೌಡರೇ, ಸಚಿವರು ಮೇಲ್ಮನೆಗೆ ಹೋಗಬೇಕಾಗಿರುವುದರಿಂದ **ಶ್ರೀ ಮಾಮನಿ ವಿಶ್ವನಾಥ ಕರಬಸಪ್ಪ** ಅವರು ಪ್ರಶ್ನೆ ಕೇಳಲಿ ನಿಮಗೆ ಆನಂತರ ಅವಕಾಶ ಕೊಡುತ್ತೇನೆ

ಶ್ರೀ ಸಿ ಎಸ್ ನಾಡಗೌಡ ಆಯಿತು

131 (539) ಶ್ರೀ ಮಾಮನಿ ವಿಶ್ವನಾಥ ಕರಬಸಪ್ಪ (ಪರಸಗಡ) ಮಾನ್ಯ ಗ್ರಾಮೀಣ ನೀರು ಪೂರೈಕೆ ನೈರ್ಮಲ್ಯ ಮತ್ತು ಸಕ್ಕರೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ –

ಅ) ಹುಬ್ಬಳ್ಳಿ – ಧಾರವಾಡ ಕುಡಿಯುವ ನೀರಿನ ಸರಬರಾಜು ಯೋಜನೆಯಿಂದ ಯಡಳ್ಳಿ – ಸಂಗ್ರೇಶಕೊಪ್ಪ ಗ್ರಾಮಗಳಿಗೆ ಕುಡಿಯುವ ನೀರಿನ ಸರಬರಾಜು ಯೋಜನೆ ಪೂರ್ಣಗೊಳ್ಳದೇ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ,

ಆ) ಹುಬ್ಬಳ್ಳಿ – ಧಾರವಾಡ ಕುಡಿಯುವ ನೀರಿನ ಸರಬರಾಜು ಯೋಜನೆಯ ವೈಪುಗಳ ಮುಖಾಂತರ ನೀರು ಪೂರೈಸಲು ಅನುಮತಿ ದೊರಕದೇ ಯಡಳ್ಳಿ – ಸಂಗ್ರೇಶಕೊಪ್ಪ ಯೋಜನೆ ಅಪೂರ್ಣಗೊಂಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ, (ಕಾರಣಗಳೊಂದಿಗೆ ಮಾಹಿತಿ ನೀಡುವುದು),

ಇ) ಯಡಳ್ಳಿ – ಸಂಗ್ರೇಶಕೊಪ್ಪ ಕುಡಿಯುವ ನೀರಿನ ಯೋಜನೆ ಪೂರ್ಣಗೊಳಿಸಲು ಸರ್ಕಾರದ ಕ್ರಮ ಏನು?

ಶ್ರೀ ಎಸ್ ಎ ರವೀಂದ್ರನಾಥ್ (ಗ್ರಾಮೀಣ ನೀರು ಪೂರೈಕೆ ನೈರ್ಮಲ್ಯ ಮತ್ತು ಸಕ್ಕರೆ ಸಚಿವರು)–

ಅ) ಬಂದಿದೆ

ಆ) ಅಗತ್ಯವಿರುವ ಪರವಾನಗಿಯನ್ನು ಹುಬ್ಬಳ್ಳಿ–ಧಾರವಾಡ ಮಹಾನಗರ ಪಾಲಿಕೆಯಿಂದ ಪಡೆಯಲು ಕ್ರಮ ವಹಿಸಲಾಗಿದೆ KUWSDB ಈ 2 – ಗ್ರಾಮಗಳಿಗೆ ಅಗತ್ಯವಿರುವ 2 50 ಲಕ್ಷ ಲೀ ನೀರನ್ನು ಪ್ರತಿ ದಿನ ಒದಗಿಸಲು ಒಪ್ಪಿರುತ್ತದೆ